ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ರಾಣಿ ಸೂರ್ಯಕುಮಾರಿ ದೇವಿ

ಡಾ. ಶೈಲಜಾ ಆಮೂರ

ಸ್ವಾಮಿ ವಿವೇಕಾನಂದರು ತಮ್ಮ ಜೀವಿತಾವಧಿಯಲ್ಲಿ ಒಟ್ಟು ಮೂರು ಬಾರಿ ರಾಜಸ್ಥಾನದ ಖೇತ್ರಿಗೆ ಭೇಟಿ ನೀಡಿದ್ದರು. ಅವರ ಪ್ರತಿಯೊಂದು ಭೇಟಿಯಲ್ಲಿಯೂ ಖೇತ್ರಿಯ ನಾಗರಿಕರು ತಮ್ಮ ಊರಿಗೆ ಮಹಾಪುರುಷರ ಆಗಮನವಾಗಿದೆ ಎಂದು ಅಭಿಮಾನದಿಂದ ಬೀಗುತ್ತಿದ್ದರು. ಖೇತ್ರಿಯ ಮಹಾರಾಜ ಅಜಿತ್‌ಸಿಂಗ್ ಹಾಗೂ ಅವನ ಕುಟುಂಬದವರಿಗಂತೂ ಸ್ವಾಮೀಜಿ ಗುರುವಾಗಿದ್ದರು. ಸ್ವಾಮೀಜಿ ಅವರ ಹಿತಚಿಂತಕರಾಗಿದ್ದರು ಅಲ್ಲದೆ ಸ್ವಾಮೀಜಿಯವರೇ ರಾಜಪರಿವಾರಕ್ಕೆ ಮಾರ್ಗದರ್ಶಕರೂ ಆಗಿದ್ದರು. ಎರಡನೆಯ ಸಾರಿ ಸ್ವಾಮಿ ವಿವೇಕಾನಂದರು ಏಪ್ರಿಲ್ ೨೧, ೧೮೯೩ನೆಯ ಇಸವಿಯಲ್ಲಿ ಖೇತ್ರಿಗೆ ಬಂದಾಗ ಅಲ್ಲಿ ಹತ್ತೊಂಬತ್ತು ದಿನಗಳವರೆಗೆ ವಾಸವಾಗಿದ್ದರು. ಆ ಸಮಯದಲ್ಲಿ ರಾಜಾ ಅಜಿತ್‌ಸಿಂಗ್‌ನ ಪತ್ನಿ ಮಹಾರಾಣಿ ಚಂಪಾವತಿ ಕೂಡ ಸ್ವಾಮೀಜಿಯವರಿಂದ ಮಂತ್ರದೀಕ್ಷೆ ಪಡೆದಳು.

ಈ ರಾಜದಂಪತಿಗಳ ಹಿರಿಯ ಮಗಳು ಸೂರ್ಯಕುಮಾರಿ. ೧೮೮೦ನೆಯ ಇಸವಿಯಲ್ಲಿ ಜನಿಸಿದ್ದ ಸೂರ್ಯಕುಮಾರಿ ಹನ್ನೆರಡು ವರ್ಷದವಳಿದ್ದಾಗ ಸ್ವಾಮಿ ವಿವೇಕಾನಂದರು ಮೊದಲನೆಯ ಬಾರಿ ಖೇತ್ರಿಗೆ ಆಗಮಿಸಿದ್ದರು. ಅಂದಿನ ದಿನಗಳಲ್ಲಿ ಸ್ತ್ರೀಯರ ಶಿಕ್ಷಣ ಎಂದರೆ ಅದನ್ನು ಸಾಮಾಜಿಕ ಕಳಂಕವೇನೋ ಎಂಬಂತೆ ಎಷ್ಟೋ ಜನ ಭಾವಿಸುತ್ತಿದ್ದರು. ರಾಜಾ ಅಜಿತ್‌ಸಿಂಗ್ ಮಾತ್ರ ತನ್ನ ಪುತ್ರಿಯರಾದ ಸೂರ್ಯಕುಮಾರಿ ಹಾಗೂ ಚಂದ್ರಕುಮಾರಿ ಈರ್ವರಿಗೂ ತನ್ನ ದರ್ಬಾರಿನ ಪಂಡಿತರಿಂದ ವಿದ್ಯಾಭ್ಯಾಸ ಕೊಡಿಸುವ ವ್ಯವಸ್ಥೆ ಮಾಡಿದ್ದನು. ನಾರಾಯಣದಾಸ ಎಂಬುವವರು ಸೂರ್ಯಕುಮಾರಿಗೆ ಶಿಕ್ಷಣ ಕಲಿಸುತ್ತಿದ್ದರು. ಹುಡುಗಿಯರಿಗೆ ಶಿಕ್ಷಣದ ವ್ಯವಸ್ಥೆ ಮಾಡಿದ್ದನ್ನು ಕಂಡು ಸ್ವಾಮಿ ವಿವೇಕಾನಂದರು ಬಹಳ ಸಂತೋಷಪಟ್ಟರು.ಅವರಿಗೆ ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಕಲಿಸುವಂತೆ ರಾಜಾ ಅಜಿತ್‌ಸಿಂಗನಿಗೆ ಪ್ರೇರೇಪಿಸಿದರು. ಅವರ ಮಾತಿನಂತೆ ಅಜಿತ್‌ಸಿಂಗ್ ಮಿಸ್ ಡ್ರೈವರ್ ಎನ್ನುವ ಪಾಶ್ಚಿಮಾತ್ಯ ಮಹಿಳೆಯನ್ನು ಜೈಪುರದಿಂದ ಖೇತ್ರಿಗೆ ಕರೆಸಿ, ಇಂಗ್ಲೀಷನ್ನೂ ಕಲಿಸುವ ಎಲ್ಲ ವ್ಯವಸ್ಥೆ ಮಾಡಿದನು.

ಅಜಿತ್‌ಸಿಂಗರ ಅರಮನೆಯ ಹೆಸರು 'ಫತೇ ವಿಲಾಸ.' ದರ್ಬಾರದ ವ್ಯವಸ್ಥಾಪಕರ ಕೊಠಡಿ ಕೆಳಗಿನ ಮಹಡಿಯಲ್ಲಿತ್ತು. ಮೊದಲನೆಯ ಮಹಡಿಗೆ ದೀವಾನ್-ಎ-ಖಾಸ್ ಎಂದು ಕರೆಯುತ್ತಿದ್ದು ಅಲ್ಲಿನ ಎಲ್ಲ ಕೋಣೆಗಳಿಗೆ ಚಾಪೆಯ ಬಾಗಿಲನ್ನು ಅಳವಡಿಸಲಾಗಿತ್ತು. ಅಲ್ಲಿಂದ ಹೆಂಗಸರು ದರ್ಬಾರಿನ ಎಲ್ಲ



ಪತಿ ಉಮೇದ್ ಸಿಂಗ್ ಹಾಗೂ ಸೂರ್ಯಕುಮಾರಿ ದೇವಿ

ಕೆಲಸಕಾರ್ಯಗಳನ್ನು ವೀಕ್ಷಿಸುತ್ತಿದ್ದರು. ಬೇರೆ ರಜಪೂತ ರಾಜ್ಯಗಳಲ್ಲಿ ಸ್ತ್ರೀಯರು ದರ್ಬಾರಿನ ಯಾವ ಚಟುವಟಿಕೆಯನ್ನೂ ವೀಕ್ಷಿಸಕೂಡದು ಎಂಬ ಕಟ್ಟಳೆಯಿತ್ತು. ಇದಾವುದನ್ನೂ ಲೆಕ್ಕಿಸದ ಅಜಿತ್‌ಸಿಂಗ್ ತನ್ನ ರಾಜದರ್ಬಾರಿನಲ್ಲಿ ಸ್ತ್ರೀಯರಿಗೂ ಭಾಗವಹಿಸುವ ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ತನ್ನ ಗುರು ಸ್ವಾಮಿ ವಿವೇಕಾನಂದರಿಗೆ ಮೂರನೆಯ ಅಂತಸ್ತಿನಲ್ಲಿ ಇರುವ ವ್ಯವಸ್ಥೆ ಮಾಡಿದ್ದನು. ಪ್ರತಿದಿನ ರಾತ್ರಿ ರಾಜ ಸ್ವಾಮಿ ವಿವೇಕಾನಂದರ ಕೊಠಡಿಗೆ ಹೋಗಿ ಅವರ ಪಾದಗಳನ್ನು ಒತ್ತುತ್ತ ಸೇವೆ ಸಲ್ಲಿಸುತ್ತಿದ್ದರು. ಎಷ್ಟೇ ಬೇಡ ಎಂದು ಸ್ವಾಮೀಜಿ ನಿರಾಕರಿಸಿದರೂ ರಾಜ ಮಾತ್ರ ತನ್ನ ಪ್ರೀತ್ಯಾದರಗಳನ್ನು ಪ್ರತಿರಾತ್ರಿ ಅವರ ಕಾಲು ಒತ್ತುವ ಮೂಲಕ ಸಲ್ಲಿಸಿಯೇ ಸಲ್ಲಿಸುತ್ತಿದ್ದ. ಅರಮನೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಮೊದಲು ಅಜಿತ್‌ಸಿಂಗ್ ಹಾಗೂ ರಾಣಿ ಚಂಪಾವತಿಯರು ಸ್ವಾಮೀಜಿಯವರ ಕೊಠಡಿಗೆ ಹೋಗಿ, ಅವರ ಪಾದಗಳಿಗೆ ನಮಸ್ಕರಿಸಿ ತಮ್ಮ ನಿತ್ಯದ ಕಾರ್ಯಕ್ಕೆ ಅಣಿಯಾಗುತ್ತಿದ್ದರು. ಇಂತಹ ಉತ್ತಮ ಸಂಸ್ಕಾರದ ರಾಜದಂಪತಿಗಳ ಚೊಚ್ಚಲ ಮಗಳಾಗಿದ್ದ ಸೂರ್ಯಕುಮಾರಿಯಲ್ಲಿಯೂ ತಂದೆತಾಯಿಯ ಸೌಜನ್ಯ, ಸರಳತೆ ಹಾಗೂ ಬುದ್ಧಿವಂತಿಕೆಗಳು ಸಹಜವಾಗಿಯೇ ಮೈಗೂಡಿದ್ದವು.

ರಾಜಾ ಅಜಿತ್‌ಸಿಂಗನ ಕೋರಿಕೆಯ ಮೇರೆಗೆ ಸ್ವಾಮೀಜಿ ಆತನ ಆಸ್ಥಾನದಲ್ಲಿ ವೇದಾಂತದ ಸರಣಿ ಉಪನ್ಯಾಸಗಳನ್ನು ನೀಡಿದರು. ರಾಜದಂಪತಿಗಳು ತಮ್ಮ ಪುತ್ರಿಯರಾದ ಸೂರ್ಯಕುಮಾರಿ ಹಾಗೂ ಚಂದ್ರಕುಮಾರಿಯವರೊಂದಿಗೆ ಅತ್ಯಂತ ಶ್ರದ್ಧೆಯಿಂದ ಎಲ್ಲ ಉಪನ್ಯಾಸಗಳನ್ನು ಆಲಿಸಿದರು. ಅಜಿತ್‌ಸಿಂಗನಿಗೆ ತನ್ನ ಪ್ರಜೆಗಳೂ ಸ್ವಾಮೀಜಿಯವರ ಮಾತುಗಳನ್ನು

ಆಲಿಸಬೇಕೆಂಬ ಇಚ್ಛೆ ಇತ್ತು, ಅದರಂತೆಯೇ ದರ್ಬಾರಿನ ಕೆಳಗಿನ ಅಂತಸ್ತಿನಲ್ಲಿ ಇತರ ಎಲ್ಲ ಜನ ಕುಳಿತುಕೊಳ್ಳುವ ಹಾಗೂ ಮೊದಲನೆಯ ಮಹಡಿಯಲ್ಲಿ ಸ್ತ್ರೀಯರೆಲ್ಲ ಕುಳಿತುಕೊಂಡು ಆಲಿಸುವ ವ್ಯವಸ್ಥೆ ಮಾಡಲಾಗಿತ್ತು. ರಾಣಿ ಚಂಪಾವತಿ ಹಾಗೂ ಪುಟ್ಟ ಸೂರ್ಯಕುಮಾರಿಗೆ ಅದ್ವೈತ ವೇದಾಂತದ ಬಗ್ಗೆ ತುಂಬ ಆಸಕ್ತಿಯುಂಟಾಯಿತು. ಆಗಲೇ ಆ ಪುಟ್ಟ ಬಾಲಕಿ ತನ್ನ ಬದುಕನ್ನು ಸ್ವಾಮೀಜಿಯವರ ತತ್ತ್ವಗಳಿಗೆ ಬದ್ಧಳಾಗಿ ರೂಪಿಸಿಕೊಳ್ಳಬೇಕೆಂಬ ನಿರ್ಧಾರವನ್ನು ಕೈಕೊಂಡಿದ್ದಳು! ಇಂಗ್ಲೀಷ್, ಉರ್ದು, ಸಂಸ್ಕೃತ ಹಾಗೂ ಹಿಂದಿ ಭಾಷೆಗಳಲ್ಲಿ ಪರಿಣತಿ ಪಡೆದಿದ್ದ ರಾಜಕುಮಾರಿ ಸೂರ್ಯಕುಮಾರಿಗೆ ಶಾಸ್ತ್ರೀಯ ಸಂಗೀತದಲ್ಲಿ ತುಂಬ ಅಭಿರುಚಿಯಿತ್ತು. ಸ್ವಾಮೀಜಿಯವರಿಂದಲೇ ಅವಳು ಎಷ್ಟೋ ಭಜನೆಗಳನ್ನು ಕಲಿತಿದ್ದಳು. ಶಿಕ್ಷಣದ ಬಗ್ಗೆ ಸ್ವಾಮಿ ವಿವೇಕಾನಂದರ ವಿಚಾರಗಳು ಹಾಗೂ ಸ್ವಾಮೀಜಿಯವರಿಗೆ ಜನಹಿತದ ಬಗ್ಗೆ ಇದ್ದ ಕಳಕಳಿ ಸೂರ್ಯಕುಮಾರಿಯ ಹೃದಯವನ್ನು ಗೆದ್ದಿದ್ದವು. ಅವರು ವಿವರವಾಗಿ ತಿಳಿಸಿದ್ದ ಅದ್ವೈತ ವೇದಾಂತ ತತ್ತ್ವಗಳಿಗೆ ಅವಳು ಬದ್ಧಳಾಗಿದ್ದಳು.

೧೯೦೪ನೆಯ ಇಸವಿಯಲ್ಲಿ ಶಹಾಪುರದ ರಾಜಾ ಉಮೇದಸಿಂಗ್‌ನೊಂದಿಗೆ ಅವಳ ವಿವಾಹವಾಯಿತು. ಉಮೇದಸಿಂಗ್ ಕೂಡ ಸ್ವಾಮೀಜಿಯವರ ಜೀವನದಲ್ಲಿರುವ 'ಶಿವನ ಸೇವೆಯೇ ನಮ್ಮ ಜೀವನದ ಗುರಿಯಾಗಬೇಕು' ಎಂಬ ತತ್ತ್ವವನ್ನು ತುಂಬ ಇಷ್ಟಪಡಲಾರಂಭಿಸಿದನು. ಸೂರ್ಯಕುಮಾರಿ ಮದುವೆಯ ನಂತರ ಕೇವಲ ವೈವಾಹಿಕ ಜೀವನಕ್ಕೆ ಬದ್ಧಳಾಗಿ ಇರದೆ ಇತರ ಪ್ರಜೆಗಳ ಸುಖದುಃಖಗಳ ಬಗ್ಗೆ ಕೂಡ ಗಮನವಿಟ್ಟಿರುತ್ತಿದ್ದಳು. ಪ್ರತಿ ಹೆಣ್ಣುಮಗಳು ಕೂಡ ಕನಿಷ್ಠ ಪಕ್ಷ ಪ್ರಾಥಮಿಕ ವಿದ್ಯಾಭ್ಯಾಸವನ್ನಾದರೂ ಪೂರೈಸಬೇಕು ಎಂದು ಅವಳು ಬಯಸಿದ್ದಳು. ತನ್ನ ಪತಿ ಉಮೇದಸಿಂಗ್‌ನಿಗೆ ತನ್ನ ಮನದಾಸೆಯನ್ನು ತಿಳಿಸಿ ಶಹಾಪುರದ ಅರಮನೆಯಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆ ನಿರ್ಮಾಣ ಮಾಡಲು ವಿನಂತಿಸಿಕೊಂಡಳು. ಸ್ವಾಮಿ ವಿವೇಕಾನಂದರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸತಿಪತಿಯರಿರ್ವರೂ ಸ್ತ್ರೀಶಿಕ್ಷಣದ ವ್ಯವಸ್ಥೆಯನ್ನು ಶಹಾಪುರದಲ್ಲಿ ಮಾಡಿದರು. ಅವಳು ಬಾಲಕಿಯಾಗಿದ್ದಾಗ ಅವಳಿಗೆ ವಿದ್ಯಾರ್ಜನೆ ಮಾಡಿಸಿದ್ದ ಅವಳ ಗುರು ಪಂಡಿತ ನಾರಾಯಣದಾಸ ಶಾಸ್ತ್ರಿಯವರೂ ಶಾಲೆಯ ಪ್ರಾರಂಭೋತ್ಸವದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇತರ ರಾಣಿಯರಂತೆ ಕೇವಲ ವೈಭೋಗದ ಜೀವನವನ್ನು ನಡೆಸದೆ ಸೂರ್ಯಕುಮಾರಿ ತನ್ನದೇ ಆದ ಆದರ್ಶ ಜೀವನವನ್ನು ರೂಪಿಸಿಕೊಂಡಿದ್ದಳು.

ಅವಳ ಸಮಕಾಲೀನರಾಗಿದ್ದ ಅಂದಿನ ಪ್ರಸಿದ್ಧ ಪಂಡಿತ ಜಬರಮಲ್ ಶರ್ಮಾ ಅವಳ ಬಗ್ಗೆ ತಮ್ಮ ಒಂದು ಲೇಖನದಲ್ಲಿ ಬರೆಯುತ್ತಾರೆ: ''ರಾಣಿ ಸೂರ್ಯಕುಮಾರಿ ಸ್ವಾಮಿ ವಿವೇಕಾನಂದರ ತತ್ತ್ವಗಳಿಂದ ಅದೆಷ್ಟು ಪ್ರಭಾವಿತರಾಗಿದ್ದರೆಂದರೆ ಸ್ವಾಮೀಜಿಯವರ ಎಲ್ಲ ಉಪನ್ಯಾಸಗಳನ್ನೂ ಹಿಂದಿ ಭಾಷೆಗೆ ಭಾಷಾಂತರಿಸಬೇಕೆಂದು ಬಹಳ ಪ್ರಯಾಸಪಟ್ಟರು. ತಾವೇ ಸ್ವತಃ ಹಲವು ಉಪನ್ಯಾಸಗಳನ್ನು ಹಿಂದಿಗೆ ತರ್ಜುಮೆ ಮಾಡಿದ್ದರು ಕೂಡ. ಆದರೆ ಸ್ವಲ್ಪ ದಿನಗಳ ನಂತರ ಅವರಿಗೆ ಅರಿವಾಯಿತು ಈ ಕೆಲಸ ತನ್ನಿಂದ ಸಾಧ್ಯವಿಲ್ಲ ಎನ್ನುವುದು. ಅವರು ಯಾವುದೋ ಒಂದು ಆರೋಗ್ಯದ ಸಮಸ್ಯೆಯಿಂದ ಬಳಲತೊಡಗಿದರು. ಹಾಸಿಗೆಯಿಂದ ಏಳುವುದೂ ಕೂಡ ತುಂಬ ಕಷ್ಟಕರವಾಯಿತು. ಆಗ ತಮ್ಮ ಪತಿ ಉಮೇದಸಿಂಗ್‌ರಿಗೆ ಸ್ವಾಮೀಜಿಯವರ ಉಪನ್ಯಾಸಗಳನ್ನು ಹಾಗೂ ಜೀವನಚರಿತ್ರೆಗಳನ್ನು ಹಿಂದಿಗೆ ತರ್ಜುಮೆ ಮಾಡುವ ತಮ್ಮ ಕಾರ್ಯದಲ್ಲಿ ಸಹಾಯ ಮಾಡುವಂತೆ ವಿನಂತಿಸಿಕೊಂಡರು. ಸತಿಪತಿಯರಿಬ್ಬರೂ ಸೇರಿ ಒಂದು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳನ್ನು (ರೂ. ೧,೭೦,೦೦೦) 'ಕಾಶಿ ನಗರಿಣಿ ಪ್ರಚಾರಿಣಿ ಸಭಾ' ಎಂಬ ಸಂಸ್ಥೆಗೆ ದೇಣಿಗೆ ನೀಡಿ ತಮ್ಮ ಕಾರ್ಯವನ್ನು ಪೂರ್ಣಗೊಳಿಸಿದರು. ಈ ಸಂಸ್ಥೆಯವರು ಮಾಡಿದ ಸಾಧನೆ ಸೂರ್ಯಕುಮಾರಿಗೆ ತೃಪ್ತಿಯನ್ನು ತಂದುಕೊಟ್ಟಿತು.''

ಸೂರ್ಯಕುಮಾರಿ ತುಂಬ ಚೆಲುವೆಯಾಗಿದ್ದಳು. ಕೇವಲ ಬಾಹ್ಯ ಸೌಂದರ್ಯ ಅಷ್ಟೇ ಅಲ್ಲ, ಅವಳ ಮನಸ್ಸು ಕೂಡ ತುಂಬ ಮೃದುವಾಗಿತ್ತು. ಅವಳ ಮೃದು ಮಧುರ ನಡೆನುಡಿಗಳಿಂದ ಪ್ರತಿಯೊಬ್ಬರನ್ನೂ ಆಕರ್ಷಿಸುತ್ತಿದ್ದಳು. ಅವಳ ಅತ್ತೆಯ ಮನೆಯಲ್ಲಿಯೂ ಅವಳು ಪ್ರತಿಯೊಬ್ಬರ ಪ್ರೀತಿಗೆ ಪಾತ್ರಳಾಗಿದ್ದಳು. ಹುಟ್ಟಿದ ಮನೆಯೂ ರಾಜ ಮನೆತನ, ಗಂಡನ ಮನೆಯೂ ರಾಜ ಮನೆತನ, ಆದಾಗ್ಯೂ ಅವಳಿಗೆ ಶ್ರೀಮಂತಿಕೆಯ ಜೀವನ ಎಂದೂ ಹಿಡಿಸಲಿಲ್ಲ. ತುಂಬ ಸರಳವಾದ ಜೀವನವನ್ನೇ ಕೊನೆಯವರೆಗೂ ಜೀವಿಸಿದಳು. ತನ್ನ ಪತಿ ಉಮೇದಸಿಂಗ್‌ನಿಗೆ ಯಾವಾಗಲೂ ಬಡ ಪ್ರಜೆಗಳಿಗೆ, ಅಸಹಾಯಕರಿಗೆ ನೆರವು ನೀಡುವಂತೆ ಪ್ರೇರೇಪಿಸುತ್ತಿದ್ದಳು.

ಸ್ವಾಮಿ ವಿವೇಕಾನಂದರ ವಿಶೇಷ ಕೃಪೆಗೆ ಪಾತ್ರಳಾಗಿದ್ದ ರಾಣಿ ಸೂರ್ಯಕುಮಾರಿ ದೇವಿ ೧೯೧೩ನೆಯ ಇಸವಿಯಲ್ಲಿ ತನ್ನ ಮೂವತ್ತನಾಲ್ಕನೆಯ ವಯಸ್ಸಿನಲ್ಲಿ ಇಹಲೋಕ ಯಾತ್ರೆ ಮುಗಿಸಿ ಶ್ರೀರಾಮಕೃಷ್ಣಲೋಕಕ್ಕೆ ತೆರಳಿದಳು.

ಭಕ್ತನ ಪವಿತ್ರತಮ ಭಕ್ತಿ ಪ್ರೇಮಕ್ಕೆ ಭಗವಂತನು ಒಳಗಾಗುವನು. ಆ ಪ್ರೇಮಕ್ಕೋಸ್ಕರ ತನ್ನನ್ನೇ ಭಕ್ತನಿಗೆ ಮಾರಿಕೊಳ್ಳುವನು. ಭಕ್ತನ ಅಂತಃಕರಣಪೂರ್ವಕವಾದ ಪ್ರೇಮದ ಮುಂದೆ ಸೋಲನ್ನೊಪ್ಪಿಕೊಳ್ಳುವನು, ಭಕ್ತನ ಹೃದಯದಲ್ಲೇ ಪ್ರೇಮಪಾಶದಿಂದ ಬಂಧಿತನಾಗಿ ವಾಸಿಸುವನು. ನಿಜವಾಗಿ ಆತನು ಭಕ್ತನಿಗೆ ಅನುಗ್ರಹಿಸದ ವಸ್ತು ಯಾವುದೂ ಇಲ್ಲ. — *ಸ್ವಾಮಿ ವಿರಜಾನಂದ*